(ಸಾಕ್ಷಿಯನ್ನು ದಿಃ 2-7-2016 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.)

***ಪಾಟೀ ಸವಾಲು ಃ ಶ್ರೀ ವಿ ಎ ಟಿ ವಕೀಲರಿಂದ***

ನನಗೆ ಕನ್ನಡ ಮತ್ತು ಇಂಗ್ಲೀಷ ಭಾಷೆ ಓದಲು ಮತ್ತು ಬರೆಯಲು ಬರುವುದಿಲ್ಲ. ನನ್ನ ಪ್ರತಿಜ್ಞಾ ಪ್ರಮಾಣ ಪತ್ರದಲ್ಲಿ ಏನೂ ಬರೆದಿದ್ದಾರೆಂತ ನನಗೆ ಗೊತ್ತಿಲ್ಲ. ನನ್ನ ತಂದೆಗೆ 4 ಜನ ಹೆಣ್ಣು ಮಕ್ಕಳು ಮತ್ತು ನಾನು ಸೇರಿ ಇಬ್ಬರು ಗಂಡು ಮಕ್ಕಳು. ಆ ಪೈಕಿ 3 ಜನ ಹೆಣ್ಣು ಮಕ್ಕಳು ತೀರಿಕೊಂಡಿದ್ದಾರೆ. ನಾನು ವಾಸಿಸುವ ಮನೆ ನಂ. 4001 ಆಗಿದ್ದು, ಅದರ ಸರ್ವೆ ನಂ. 301 ಆಗಿದೆ. ನಾನು ಆ ಸರ್ವೇ ನಂಬರನ ಸದ್ರಿ ಮನೆ ನಂಬರದಲ್ಲಿ ವಾಸ ಇದ್ದೇನೆ ಎಂದು ತೋರಿಸುವ ಕುರಿತು ಯಾವುದೇ ದಾಖಲೆಯನ್ನು ಕೊರ್ಟಿಗೆ ಹಾಜರಪಡಿಸಿಲ್ಲ. ನನ್ನ ಅಕ್ಕ ಮನೋರಮಾ ಯಾವಾಗ ತೀರಿಕೊಂಡಳು ಎಂದು ನನಗೆ ಗೊತ್ತಿಲ್ಲ. ಆಕೆ ಮುಂಬೈದಲ್ಲಿ ತೀರಿಕೊಂಡಿರುತ್ತಾಳೆ. ನನ್ನ

ಇನ್ನೊಬ್ಬ ಅಕ್ಕ ಮಂಜುಳಾ ಯಾವಾಗ ತೀರಿಕೊಂಡಳು ಎಂದು ನನಗೆ ಗೊತ್ತಿಲ್ಲ. ಆಕೆ ಕಾರವಾರದಲ್ಲಿ ತೀರಿಕೊಂಡಿರುತ್ತಾಳೆ. ನನ್ನ ಮತ್ತೊಬ್ಬ ಅಕ್ಕ ಪುಷ್ಪಾ ಯಾವಾಗ ತೀರಿಕೊಂಡಳು ಎಂದು ನನಗೆ ಗೊತ್ತಿಲ್ಲ. ಆಕೆ ಮುಂಬೈದಲ್ಲಿ ತೀರಿಕೊಂಡಿರುತ್ತಾಳೆ. ನನ್ನ ಹಿರಿಯ ಅಕ್ಕ ಮನೋರಮಾ ದಿಃ 6-6-2005 ರಂದು ತೀರಿಕೊಂಡಿದ್ದಾರೆಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಶಂಕರ ರಾಮ ರೈಕರ ದಿಃ 13-6-2000 ರಂದು ತೀರಿಕೊಂಡಿದ್ದಾರೆ. ದಾವಾ ಸ್ವತ್ತು ನನ್ನ ತಂದೆಯವರ ಸ್ವಂತ ಆಸ್ತಿ ಆಗಿರುತ್ತದೆ. ದಾವಾ ಸರ್ವೇ ನಂ. 375/1ಎ ರಲ್ಲಿ 00-25-04 ವಿಸ್ತೀರ್ಣ ಇದೆ. ದಾವಾ ಸರ್ವೇ ನಂ. 375/1ಎ1ಬ ರಲ್ಲಿ 00-5-00 ವಿಸ್ತೀರ್ಣ ಇದೆ. ಸರ್ವೇ ನಂ. 375/1ಎ1ಬದಲ್ಲಿ 0-5-0 ಜಮೀನನ್ನು 4 ನೇ ಪ್ರತಿವಾದಿಗೆ ನನ್ನ ತಂದೆಯವರು ಮಾರಾಟ ಮಾಡಿದ್ದರು. ನನ್ನ ತಂದೆಯವರು 4 ನೇ ಪ್ರತಿವಾದಿಯ ವಿರುದ್ಧ ಸದ್ರಿ ಜಮೀನನ್ನು ಸ್ವಾಧೀನಕ್ಕಾಗಿ ಒಂದು ದಾವೆ ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಮತ್ತು ನನ್ನ ಸ್ನೇಹಿತ ನಾರಾಯಣ ಇಬ್ಬರೂ ಸೇರಿ ನನ್ನ ತಂದೆಯವರ ಸಹಿಯನ್ನು ಫೋರ್ಜರಿ ಮಾಡಿ 4 ನೇ ಪ್ರತಿವಾದಿಯ ಹೆಸರಿಗೆ ಸದ್ರಿ 5 ಗುಂಟೆ ಸ್ವತ್ತಿನ ಬಗ್ಗೆ ಕ್ರಯದ ವ್ಯವಹಾರ ನಡೆಸಿದ್ದೇವು ಎಂಬುದಾಗಿ ನನ್ನ ತಂದೆಯವರು 4 ನೇ ಪ್ರತಿವಾದಿಯ ವಿರುದ್ಧ ದಾವೆ ಸಲ್ಲಿಸಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ.

ನನ್ನ ತಂದೆಯವರು ದಾವಾ ಸ್ವತ್ತುಗಳ ಬಗ್ಗೆ 1 ನೇ ಪ್ರತಿವಾದಿಯ ಹೆಸರಿಗೆ ವಿಲ್ ಪತ್ರ ಬರೆದುಕೊಟ್ಟಿದ್ದಾರೆಂದರೆ ಸುಳ್ಳು. ಸದ್ರಿ ವಿಲ್ ಪತ್ರದ ಪ್ರಕಾರ 1 ನೇ ಪ್ರತಿವಾದಿಯು ದಾವಾ ಸ್ವತ್ತುಗಳ ಮಾಲೀಕರಾಗಿದ್ದಾರೆ ಎಂದರೆ ಸುಳ್ಳು. ನನ್ನ ತಂದೆಯವರು ತೀರಿಕೊಂಡ ಎಷ್ಟು ವರ್ಷಗಳ ನಂತರ ವಾರಸಾ ದಾಖಲೆಯಲ್ಲಿ ಸ್ವತ್ತುಗಳನ್ನು ನಮೂದು ಮಾಡಲಾಗಿದೆ ಅಂತ ನನಗೆ ಗೊತ್ತಿಲ್ಲ. 3 ಜನ ಹೆಣ್ಣು ಮಕ್ಕಳು ತೀರಿಕೊಂಡಿದ್ದರೂ ಸಹ ಮ್ಯುಟೇಶನ ಎಂಟ್ರಿಯಲ್ಲಿ ಅವರುಗಳ ಹೆಸರು ಸಹ ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದ್ರಿ ಮ್ಯುಟೇಶನ ಎಂಟ್ರಿಯನ್ನು ಪ್ರಶ್ನಿಸಿ 1ನೇ ಪ್ರತಿವಾದಿ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಸದ್ರಿ ಕೇಸಿನಲ್ಲಿ ನನಗೆ ನೋಟಿಸು ಬಂದಿತ್ತು ಎಂದರೆ ಸರಿಯಲ್ಲ.

***(ಕೋರಿಕೆ ಮೇರೆಗೆ ಪಾಟೀ ಸವಾಲಿಗಾಗಿ ಸಾಕ್ಷಿ ವಿಚಾರಣೆಯನ್ನು ಮುಂದೂಡಲಾಯಿತು.)***

(ತೆರೆದ ನ್ಯಾ.ದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಕಾರವಾರ.